ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 : ದಿನಾಂಕ: 12-11-2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂಸತ್ ಮತ್ತು ಮುಖ್ಯಮಂತ್ರಿಗಳೊಂದಿಗೆ ಮಕ್ಕಳ ಸಂವಾದ<br>ಮುಖ್ಯ ಅತಿಥಿ ಮತ್ತು ಸಂವಾದ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ಉಪಸ್ಥಿತಿ:<br>ಶ್ರೀಮತಿ ಉಮಾಶ್ರೀ,<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವರು<br>ಶ್ರೀ ಕಿಮ್ಮನೆ ರತ್ನಾಕರ,<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಸಚಿವರು | 13-11-2014<br>ಗುರುವಾರ<br>ಬೆಳಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 334<br>ಸಮ್ಮೇಳನ ಸಭಾಂಗಣ,<br>ಮೂರನೇ ಮಹಡಿ,<br>ವಿಧಾನ ಸೌಧ,<br>ಬೆಂಗಳೂರು |
| 2 | ಕರ್ನಾಟಕ ರಾಜ್ಯ ಮಹಿಳಾ ಆಯೋಗ<br>ಪ್ರಗತಿಯತ್ತ ಮಹಿಳೆ ಸಮಸ್ಯೆಗಳು-ಸವಾಲುಗಳು<br>ಉದ್ಘಾಟನೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ಅಧ್ಯಕ್ಷತೆ:<br>ಶ್ರೀಮತಿ ಉಮಾಶ್ರೀ<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು | 13-11-2014<br>ಗುರುವಾರ<br>ಬೆಳಗ್ಗೆ<br>11-00 ಗಂಟೆಗೆ | ಶಿಕ್ಷಕರ ಸದನ<br>ಕೆಂಪೇಗೌಡ ರಸ್ತೆ,<br>ಬೆಂಗಳೂರು |
| 3 | **Signing of a Memorandum of Agreement (MoA) for Establishment of Science Gallery in Bengaluru<br>Address:<br>Sri. S.R. Patil,<br>Minister for Information Technology, Biotechnology and** | **13-11-2014<br>Thursday<br>1-00 P.M.** | **Vivanta by Taj Yeshwantpur<br>2275 Tumkur Road, Yeshwanthpur<br>Bengaluru** |

| | | | |
|---|---|---|---|
| | **Science and Technology**<br><br>**Mr. Damien English,**<br>**Irish Minister of State for**<br>**Department of Education and**<br>**Skills and Jobs** | | |

ನಿರ್ದೇಶಕರ ಪರವಾಗಿ

<u>ಪತ್ರಿಕಾ ಪ್ರಕಟಣೆ</u>

## ಎರಡು ದಿನಗಳ ವೈಜ್ಞಾನಿಕ ಮನೋಭಾವ ಜಾಗೃತಿ ಕಮ್ಮಟ

ಬೆಂಗಳೂರು, ನ.12 (ಕರ್ನಾಟಕ ವಾರ್ತೆ)-

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಜನವಿಜ್ಞಾನ ಚಳುವಳಿಯ ಉಪ ಸಮಿತಿಯಿಂದ ರಾಜ್ಯದಲ್ಲಿ ವೈಜ್ಞಾನಿಕ ಮನೋಭಾವಕ್ಕೆ ಪ್ರೇರಣೆ ನೀಡಬಲ್ಲ ಮತ್ತು ವಿಜ್ಞಾನದ ಮಾನವೀಯ ಮುಖವನ್ನು ಜನ ಸಾಮಾನ್ಯರಿಗೆ ಪರಿಚಯಿಸುವ ಉದ್ದೇಶದಿಂದ ರಾಜ್ಯಮಟ್ಟದ ದಕ್ಷಿಣ ಕರ್ನಾಟಕ ವಿಭಾಗದ ಎರಡು ದಿನಗಳ ವೈಜ್ಞಾನಿಕ ಮನೋಭಾವ ಜಾಗೃತಿ ಕಮ್ಮಟವನ್ನು ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾಲ್ಲೂಕು ಹಾಸನ ಜಿಲ್ಲೆ ಇಲ್ಲಿ ನವೆಂಬರ್ 29 ಮತ್ತು 30 ಸಂಘಟಿಸುತ್ತಿದೆ.

ಈ ಕಮ್ಮಟಕ್ಕೆ ವೈಜ್ಞಾನಿಕ ಮನೋಭಾವ ಕುರಿತು ಆಸಕ್ತಿಯಿರುವ ಯಾವುದೇ ವ್ಯಕ್ತಿ ಭಾಗವಹಿಸಬಹುದು. 2 ದಿನಗಳ ಕಾಲ ಕಮ್ಮಟದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕರಾವಿಪ ಒದಗಿಸುವುದು. ಈ ಕಮ್ಮಟಕ್ಕೆ ಭಾಗಬಹಿಸಲು ಇಚ್ಛಸುವ ಆಸಕ್ತರು ಪತ್ರ ಮುಖೇನ ಅಥವಾ ದೂರವಾಣಿ/ಮೊಬೈಲ್ ಮೂಲಕ ಸಂಚಾಲಕರಿಗೆ ನವೆಂಬರ್ 20 ರೊಳಗಾಗಿ ತಿಳಿಸುವುದು.

ಹೆಚ್ಚಿನ ಮಾಹಿತಿಗಾಗಿ ಶ್ರೀ ಶ್ರೀನಿವಾಸ ನಟೇಕರ್, ಸಂಚಾಲಕರು, ರಾಜ್ಯಮಟ್ಟದ ದಕ್ಷಿಣ ಕರ್ನಾಟಕ ವಿಭಾಗದ ವೈಜ್ಞಾನಿಕ ಮನೋಭಾವ ಜಾಗೃತಿ ಕಮ್ಮಟ ಮೊ. 9844614676 ಹಾಗೂ ಡಾ: ಎಚ್.ಆರ್. ಸ್ವಾಮಿ ಕರಾವಿಪ ಹಿರಿಯ ಸದಸ್ಯರು, ಮೊ. 7760040888 ಇವರನ್ನು ಸಂಪರ್ಕಿಸುವುದು. ಒಂದು ಜಿಲ್ಲೆಯಿಂದ ಎಷ್ಟು ಅಭ್ಯರ್ಥಿಗಳಾದರು ಅರ್ಜಿ ಸಲ್ಲಿಸಬಹುದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

ಬಾಬು/ಕೆಎಂ

## ರಾಜ್ಯದ ಗ್ರಾಮಪಂಚಾಯತಿ ಸಶಕ್ತಿಕರಣಕ್ಕೆ 2 ನೇ ಹಂತದ ಯೋಜನೆ ಜಾರಿ

ಬೆಂಗಳೂರು, ನ.12 (ಕರ್ನಾಟಕ ವಾರ್ತೆ)-

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸಧೃಢಗೊಳಸಲು ಪಂಚಾಯತ್‌ರಾಜ್ ಸಶಕ್ತೀಕರಣ 2 ನೇ ಹಂತದ ಯೋಜನೆಯನ್ನು ಶೀಘ್ರ ಜಾರಿಗೆ ತರಲಾಗುವುದೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್.ಕೆ. ಪಾಟೀಲ್ ಅವರು ತಿಳಸಿದರು.

ವಿಧಾನ ಸೌಧದ ತಮ್ಮ ಕಚೇರಿಯಲ್ಲಿ ಇಂದು ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು. ರಾಜ್ಯದ ಪಂಚಾಯತಿಗಳನ್ನು ಶಕ್ತಿಯುತವಾಗಿ ಮಾಡಬೇಕೆಂಬುದು ಕನಸಾಗಿದ್ದು ಮೊದಲ ಹಂತದಲ್ಲಿ 11 ಜಿಲ್ಲೆಗಳಲ್ಲಿನ 39 ತಾಲ್ಲೂಕುಗಳಲ್ಲಿ ಯೋಜನೆಯನ್ನು ಜಾರಿಗೆ ತರಲಾಗಿದ್ದು ಈ ಯೋಜನೆಗೆ ಸುಮಾರು 660 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಹೇಳದರು.

2 ನೇ ಹಂತದಲ್ಲಿ 25 ಜಿಲ್ಲೆಗಳ 79 ತಾಲ್ಲೂಕಗಳ 2585 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮುಂದಿನ 5 ವರ್ಷಗಳಲ್ಲಿ ಯೋಜನೆ ಜಾರಿಯಾಗಲಿದ್ದು ಪ್ರಸಕ್ತ ಸಾಲಿನಲ್ಲಿಯೇ 2 ನೇ ಹಂತದ ಯೋಜನೆಯನ್ನು ಆರಂಭಿಸಲಾಗುತ್ತಿದೆ ಎಂದು ಸಚಿವರು ಪ್ರಕಟಿಸಿದರು. ಈ ಯೋಜನೆಗೆ 2000 ಕೋಟಿ ರೂ.ಗಳ ವೆಚ್ಚ ಆಗಲಿದ್ದು ವಿಶ್ವಸಂಸ್ಥೆ 1400 ಕೋಟಿ ರೂ. ನೆರವು ನೀಡಲಿದೆ ಹಾಗೂ ರಾಜ್ಯ ಸರ್ಕಾರವು 600 ಕೋಟಿ ರೂ. ವೆಚ್ಚ ಭರಿಸಲಿದೆ ಎಂದು ಹೇಳದರು.

ಪ್ರತಿ ವರ್ಷ ಪ್ರತಿ ಗ್ರಾಮಪಂಚಾಯತಿಗಳಗೆ ಮೊದಲನೇ ವರ್ಷದಲ್ಲಿ 12 ಲಕ್ಷ ರೂ., 2 ನೇ ವರ್ಷದಲ್ಲಿ 14 ಲಕ್ಷ ರೂ. ಮೂರನೇ ವರ್ಷದಲ್ಲಿ 16 ಲಕ್ಷ ರೂ. 4 ನೇ ವರ್ಷದಲ್ಲಿ 14 ಲಕ್ಷರೂ.ಗಳನ್ನು ಹಾಗೂ 5 ಹಾಗೂ ಅಂತಿಮ ವರ್ಷದಲ್ಲಿ 12 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗುವುದೆಂದು ಸಚಿವರು ತಿಳಸಿದರು.

ಈ ಯೋಜನೆಯಡಿ ಗ್ರಾಮಪಂಚಾಯತಿಗಳನ್ನು ಸಶಕ್ತಿಕರಣಗೊಳಸುವುದು ಸಾಮರ್ಥ್ಯವೃಧ್ಧಿಸುವುದು ಆಧುನಿಕ ತಾಂತ್ರಿಕತೆ ಅಳವಡಿಸುವುದು, ಓಬಳ ಮಟ್ಟದಲ್ಲಿ ಗ್ರಾಮೀಣಾಭಿವೃದ್ಧಿ ಅಧಿಕಾರಿಗಳ ಹುದ್ದೆ ಸೃಷ್ಠಿಸುವುದು ಹಾಗೂ ಆಡಳತಾತ್ಮಕ ಶಕ್ತಿ ತುಂಬುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಅವರು ಹೇಳದರು. ಗ್ರಾಮ ಪಂಚಾಯತ್ ಅಧ್ಯಕ್ಷರೂ ಸೇರಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಗೆ, ಡಾಟಾ ಎಂಟ್ರಿ ಆಪರೇಟ್‌ರುಗಳಗೆ ಹಾಗೂ ಗ್ರಾಮಪಂಚಾಯತಿ ಸದಸ್ಯರು ಮತ್ತು ಸಿಬ್ಬಂದಿಗಳಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಸಿದರು.

## <u>ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪೀಠ ಸ್ಥಾಪನೆ – ಒಂದು ಟಿಪ್ಪಣಿ</u>

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವು ತನ್ನ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಕನ್ನಡ ಪೀಠವೊಂದನ್ನು ಸ್ಥಾಪಿಸಬೇಕೆಂಬ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಮುಂದೆ ಮಂಡಿಸಿರುತ್ತದೆ.

ಈ ವಿಶ್ವವಿದ್ಯಾಲಯವು ಒಂದು ಸಂಶೋಧನಾ ಸಂಸ್ಥೆಯಾಗಿದ್ದು, ಅಂತರ್‌ಶಿಸ್ತೀಯ ಯೋಜನೆಯಡಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸುವುದರಿಂದ ಇಲ್ಲಿ ಕನ್ನಡ ಭಾಷೆಯ ಬೋಧನೆ ಹಾಗೂ ಸಂಶೋಧನೆಗೆ ಪ್ರಾಧಾನ್ಯತೆ ಸಿಗುತ್ತದೆ. ಇಲ್ಲಿನ ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನದ ಶಾಲೆಯು (School of Language, Literature and

Culture Studies (SLL&CS) ಒಂದು ಅದ್ವಿತೀಯ ಸಂಸ್ಥೆಯಾಗಿದ್ದು, ಅಂತಾರಾಷ್ಟ್ರೀಯ ಮನ್ನಣೆ ಪಡೆದ ಬೋಧಕ ವೃಂದವನ್ನು ಹೊಂದಿದೆ. ಹಲವಾರು ಜಾಗತಿಕ ಯುರೋಪಿಯನ್ ಭಾಷೆ, ಏಶಿಯನ್ ಹಾಗೂ ಭಾರತೀಯ ಭಾಷೆಗಳ ಬೋಧನೆ ಮತ್ತು ಅಧ್ಯಯನವನ್ನು ನಡೆಸುತ್ತಿದೆ. ಈ ಸಂಸ್ಥೆಯು ಒಂದು ಭಾಷೆಯ ಬೋಧನೆಯನ್ನು ಮಾತ್ರವಲ್ಲದೆ ಅದರ ಸಂಸ್ಕೃತಿ, ಕಲೆ ಮತ್ತು ಭಾಷೆಗಳ ಪರಂಪರೆಯನ್ನು ಬೋಧಿಸುತ್ತದೆ. ಪ್ರಸ್ತುತ ಇಲ್ಲಿ ಹಿಂದಿ, ಉರ್ದು ಮತ್ತು ತಮಿಳು ಭಾಷೆಗಳನ್ನು ಬೋಧಿಸಲಾಗುತ್ತಿದೆ. ಹಾಗೂ ಇಷ್ಟರಲ್ಲೇ ಮರಾಠಿ ಮತ್ತು ಇತರ ಭಾಷೆಗಳ ಬೋಧನೆ ಹಾಗೂ ಅಧ್ಯಯನವನ್ನು ಪ್ರಾರಂಭಿಸಲಿದೆ.

ಈ ಶಾಲೆಯಲ್ಲಿ ಭಾಷಾಂತರ ಮತ್ತು ಭಾಷಾ ಶಾಸ್ತ್ರಗಳು ಅಧ್ಯಯನ ವಿಷಯಗಳಾಗಿವೆ. ಇಲ್ಲಿನ ಪ್ರೊ.ಅನ್ವಿತಾ ಅಬ್ಬಿ ಅವರು ಅಂಡಮಾನ್ ಭಾಷೆಯ ಒಂದು ನಿಘಂಟನ್ನು ಪ್ರಕಟಿಸಿದ್ದು, ಇದಕ್ಕೆ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.

ಈ ಶಾಲೆಯಲ್ಲಿ ಕನ್ನಡ ಭಾಷೆಯ ಬೋಧನೆ ಪ್ರಾರಂಬಿಸಿದಲ್ಲಿ ಈ ವಿಶ್ವವಿದ್ಯಾಲಯದ ಇತರೆ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯದ ಹಾಗೂ ಸಂಸ್ಕೃತಿಯ ಬಗ್ಗೆ ಸಂಶೋಧನ ಯೋಜನೆಗಳನ್ನು ಹಮ್ಮಿಕೊಳ್ಳುವ ಸಾಧ್ಯತೆ ಇಲ್ಲಿನ ಸಾಮಾಜಿಕ ವಿಜ್ಞಾನದ ಶಾಲೆಯಲ್ಲಿ (school of social sciences) ಇದರಿಂದ ಕರ್ನಾಟಕ ರಾಜ್ಯದ ಬಗ್ಗೆ ಸಂಶೋಧನೆ ಕಾರ್ಯಕ್ರಮ ಪ್ರಾರಂಭವಾಗಿ ಈ ವಿಶ್ವವಿದ್ಯಾಲಯಡಿಯಲ್ಲಿಯೇ ಕರ್ನಾಟಕ ಭಾಷೆಗಳನ್ನು ಬೆಳಸಲು ಅನುಕೂಲವಾಗುವುದು. ಇಲ್ಲಿನ ಇತಿಹಾಸ ಅಧ್ಯಯನ ಕೇಂದ್ರದ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈಗಾಗಲೇ ಕರ್ನಾಟಕದ ಇತಿಹಾಸ ಹಾಗೂ ಪ್ರಾಂತೀಯ ವಿಷಯಗಳ ಬಗ್ಗೆ ಸಂಶೋಧನೆಯನ್ನು ನಡೆಸಿರುತ್ತಾರೆ. ಹಳೆ ಮೈಸೂರು ಪ್ರಾಂತ್ಯದ ಬಗ್ಗೆ ಹಾಗೂ ಕರ್ನಾಟಕದ ವಿವಿಧ ಭಾಷೆಗಳ ಬಗ್ಗೆ ಈಗಾಗಲೇ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಇಲ್ಲಿನ ಕಲೆ ಮತ್ತು ಸೌಂದರ್ಯ ಶಾಲೆ ಮೂರು ವಿಭಾಗಗಳನ್ನು ಹೊಂದಿದೆ. ಅವೆಂದರೆ – ರಂಗ ಅಧ್ಯಯನ, ದೃಶ್ಯ ಕಲೆ ಹಾಗೂ ಚಲನಚಿತ್ರ ಅಧ್ಯಯನ. ಇಲ್ಲಿನ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2005) ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(2013) ಸಂದಿವೆ. ಅವರು ಬರೆದಿರುವ ಹಲವಾರು ನಾಟಕಗಳು ಜನಮನ್ನಣೆ ಗಳಿಸಿವೆ. ಕನ್ನಡ ಭಾಷೆ ಹಾಗೂ ಕನ್ನಡ ಸಾಹಿತ್ಯಕ್ಕೆ ಮೀಸಲಾದ 'ಅನಿಕೇತನ' ಪತ್ರಿಕೆಯ ಸಂಪಾದಕರಾಗಿಯೂ ಅವರು ಕಾರ್ಯ ನಿರ್ವಹಿಸಿರುತ್ತಾರೆ.

ಹೀಗಾಗಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಒಂದು ಕನ್ನಡ ಪೀಠ ಸ್ಥಾಪನೆಯಾದಲ್ಲಿ ಕರ್ನಾಟಕ ರಾಜ್ಯ ಮತ್ತು ಕನ್ನಡ ಭಾಷೆಯ ಉತ್ತಮ ಪರಂಪರೆ ಹಾಗೂ ಮಾನ್ಯತೆಯನ್ನು ಇತರ ದೇಶಗಳಿಗೂ ಪರಿಚಯಮಾಡಿಕೊಡುವ ಅತ್ಯುತ್ತಮ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.

# ಮಕ್ಕಳ ದಿನಾಚಣರೆ: ಪ್ರಶಸ್ತಿ ಪ್ರಕಟ

ಬೆಂಗಳೂರು, ನ.12 (ಕರ್ನಾಟಕ ವಾರ್ತೆ)–

ಮಕ್ಕಳ ದಿನಾಚರಣೆ ಅಂಗವಾಗಿ ನವೆಂಬರ್ 14ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬೃಹತ್ ಕಾರ್ಯಕ್ರಮ ಆಯೋಜಿಸಲಾಹುವೆ. ಆಚರಿಸಲಾಗುತ್ತಿದೆ. ಸನ್ಮಾನ್ಯ ಘನತೆವೆತ್ತ ರಾಜ್ಯಪಾಲ ಶ್ರೀ ವಜುಭಾಯಿ ವಾಲಾ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಮಕ್ಕಳಿಗೆ ಶೌರ್ಯ ಪ್ರಶಸ್ತಿ, ಉತ್ತಮ ಸೇವೆ ಸಲ್ಲಿಸಿದ ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವ್ಯದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಉಮಾಶ್ರೀ ಹೇಳಿದ್ದಾರೆ.

6–15 ವರ್ಷದ ವಯೋಮಿತಿಯೊಳಗಿನ ಮಕ್ಕಳಲ್ಲಿ ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿ ಇತರರ ಪ್ರಾಣ ರಕ್ಷಣೆ ಮಾಡಿದ ಮಕ್ಕಳಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು 2006–07ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಪ್ರತಿ ಜಿಲ್ಲೆಯಿಂದ 2 ಬಾಲಕರನ್ನು ಹೊಯ್ಸಳ ಪ್ರಶಸ್ತಿಗೆ ಮತ್ತು 2 ಬಾಲಕಿಯರನ್ನು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಸದರಿ ಮಕ್ಕಳಿಗೆ ಮಕ್ಕಳ ದಿನಾಚರಣೆ ಕಾರ್ಯಕ್ರಮದಂದು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯನ್ನು ಹಾಗೂ ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆ ವತಿಯಿಂದ ರೂ.1,000 ನಗದು ಮತ್ತು ಶಿಕ್ಷಕರ ಕಲ್ಯಾಣ ನಿಧಿಯಿಂದ ರೂ.2,500/– ನಗದು ಬಹುಮಾನ ನೀಡಲಾಗುವುದು. ಸದರಿ ಮಕ್ಕಳಿಗೆ ಇಲಾಖಾ ವತಿಯಿಂದ ಜಿಲ್ಲಾ ಮಟ್ಟದಲ್ಲಿ ರೂ.10,000/– ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಲೆ, ಕ್ರೀಡೆ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿರುವ ಮಕ್ಕಳನ್ನು ಗುರುತಿಸಿ ಮಕ್ಕಳ ದಿನಾಚರಣೆ ಕಾರ್ಯಕ್ರಮದಂದು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ರೂ.10,000/– ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು. ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಇಬ್ಬರು ವ್ಯಕ್ತಿಗಳಿಗೆ ತಲಾ ರೂ.25,000/– ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಎರಡು ಸಂಸ್ಥೆಗಳಿಗೆ ತಲಾ ರೂ.1,00,000/– ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆ ವತಿಯಿಂದ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಒಬ್ಬ ಸಮಾಜ ಸೇವಾ ಕಾರ್ಯಕರ್ತರನ್ನು ಗುರುತಿಸಿ ರೂ.5,000/–ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗುವ್ಯದು ಎಂದು ಸಚಿವೆ ಉಮಾಶ್ರೀ ಹೇಳಿದ್ದಾರೆ.

**ಧೈರ್ಯ ಸಾಹಸ ಪ್ರದರ್ಶಿಸಿದ ಬಾಲಕರಿಗಾಗಿ ಹೊಯ್ಸಳ ಮತ್ತು ಬಾಲಕಿಯರಿಗಾಗಿ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗಳು**

ಪ್ರತಿ ವರ್ಷವೂ ಮಕ್ಕಳ ದಿನಾಚರಣೆ ಸಮಾರಂಭದಂದು ಧೈರ್ಯ ಸಾಹಸ ಪ್ರದರ್ಶಿಸಿ, ಸಮಯ ಪ್ರಜ್ಞೆಯಿಂದ ಇತರರ ಪ್ರಾಣವನ್ನು ಅಪಾಯದಿಂದ ರಕ್ಷಿಸಿದಂತಹ ಮಕ್ಕಳಿಗೆ ಶೌರ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ. 2014–15ನೇ ಸಾಲಿಗೆ ಈ ಕೆಳಕಂಡ ಮಕ್ಕಳನ್ನು ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

| ಕ್ರ. ಸಂ | ಹೆಸರು ಮತ್ತು ವಿಳಾಸ | ಪ್ರಕರಣದ ವಿವರ |
|---|---|---|
| 1 | ಮಾ।। ದೀಕ್ಷಿತ್ ಜಿ.ಪಿ,<br>ತಂದೆ.ಪರಮೇಶ್ವರಾಚಾರ್,<br>ಗವಟೂರು, ರಿಪ್ಪನ್ ಪೇಟೆ ಅಂಚೆ, ಹೊಸನಗರ,<br>ಶಿವಮೊಗ್ಗ ಜಿಲ್ಲೆ<br>04.05.2005 (9 ವರ್ಷ)<br>4ನೇ ತರಗತಿ | ದಿನಾಂಕ:29.07.2014 ರಂದು ದೀಕ್ಷಿತ್ ಹಾಗೂ ತನ್ನ ಚಿಕ್ಕಪ್ಪನ ಮಗನಾದ 5 ವರ್ಷದ ಸೃಜನ್ ಇಬ್ಬರು ಆಟವಾಡುತ್ತಿರುವಾಗ ನಾಯಿ ದಾಳಿಯಿಂದ ಹೆದರಿ ಸೃಜನ್ ಓಡುತ್ತಿದ್ದಾಗ ಮನೆಯ ಮುಂಭಾಗದ ಗದ್ದೆಯಲ್ಲಿ ಕುಡಿಯುವ ನೀರಿಗಾಗಿ ತೋಡಿದ್ದ ಸುಮಾರು 25 ಅಡಿ ಆಳದ ಬಾವಿಗೆ ಬಿದ್ದಿರುತ್ತಾನೆ. ದೀಕ್ಷಿತ್ ಸಮಯ ಪ್ರಜ್ಞೆಯಿಂದ ಬಾವಿಗೆ ಬಿದ್ದ ಸೃಜನ್‌ನನ್ನು ಕಾಪಾಡಿರುತ್ತಾನೆ. |
| 2 | ಮಾ।। ಕಿಶನ್ ಜಿ.ಕೆ,<br>ತಂದೆ ಕಾಂತರಾಜು ಜಿ.ಸಿ,<br>ರಾಘವೇಂದ್ರ ಬಡಾವಣೆ,<br>ಮಧುಗಿರಿ,<br>ತುಮಕೂರು ಜಿಲ್ಲೆ.<br>20.04.1999 (15 ವರ್ಷ)<br>10ನೇ ತರಗತಿ | ದಿನಾಂಕ:10.10.2013ರಂದು ದಸರಾ ರಜಾ ವೇಳೆಯಲ್ಲಿ ಶಾಲಾವತಿಯಿಂದ 15 ವಿದ್ಯಾರ್ಥಿಗಳು ಪಿಕ್‌ನಿಕ್‌ಗಾಗಿ ತೆರೆಳಿದರು. ಮಧ್ಯಾಹ್ನದ ವೇಳೆಯಲ್ಲಿ ಕೊಳದ ನೀರಿನಲ್ಲಿ ಈಜಾಡುತ್ತಿದ್ದಾಗ ತರುಣ್ ಮತ್ತು ಯಶಸ್ ಎಂಬ ಇಬ್ಬರು ಗೆಳೆಯರು ನೀರಿನಲ್ಲಿ ಮುಳುಗುತ್ತಿದ್ದರು. ಈ ಬಾಲಕರು ಸಹಾಯ ಕೋರಿ ಜೋರಾಗಿ ಕೂಗಾಡುತ್ತಿದ್ದರು. ಇದನ್ನು ನೋಡಿದ ಕಿಶನ್ ತನ್ನ ಪ್ರಾಣವನ್ನು ಲೆಕ್ಕಿಸದೇ ಕೊಳಕ್ಕೆ ಹಾರಿ ಪ್ರಾಣಾಪಾಯದಲ್ಲಿದ್ದ ಇಬ್ಬರು ಗೆಳೆಯರ ಪ್ರಾಣವನ್ನು ರಕ್ಷಿಸಿರುತ್ತಾನೆ. |

| | | |
|---|---|---|
| 3 | ಮಾ॥ ಸುಮಿತಕುಮಾರ ಸಿಂದಗಿ,<br>ತಂದೆ: ಶ್ರೀ ಮಂಜುನಾಥ ಭೀಮಪ್ಪ ಸಿಂದಗಿ,<br>ಸಾಯಿನಗರ, ಮುಧೋಳ, ಬಾಗಲಕೋಟೆ.<br>18.07.2005 (9 ವರ್ಷ)<br>3ನೇ ತರಗತಿ | ತನ್ನ ಪತಿ ಮರಣ ಹೊಂದಿದ ಹಿನ್ನೆಲೆಯಲ್ಲಿ ಪತ್ನಿಯು ನೊಂದು ತನ್ನ ಎರಡು ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆಂದು ದಿನಾಂಕ:26.03.2014 ರಂದು ಆಲಮಟ್ಟಿ ಜಲಾಶಯದ ದಡಕ್ಕೆ ತೆರೆಳಿರುತ್ತಾಳೆ. ತನ್ನ ಎರಡು ಮಕ್ಕಳನ್ನು ರೈಲಿನ ಹಳಿಯ ಮಧ್ಯದಲ್ಲಿ ಮಲಗಿಸುತ್ತಿರುವಾಗಲೇ ರೈಲು ಆಗಮಿಸಿದ್ದರಿಂದ ಚಕ್ರದಡಿ ಸೀರೆ ಸಿಲುಕಿ ತಾಯಿ ಮೃತಪಟ್ಟಿರುತ್ತಾಳೆ. ಮಕ್ಕಳನ್ನು ಉದ್ದವಾಗಿ ಮಲಗಿಸಿದ್ದರಿಂದ ಇಬ್ಬರೂ ಬದುಕುಳಿದಿದ್ದಾರೆ. ತನ್ನ ತಾಯಿ ಮರಣ ಹೊಂದಿದ್ದರೂ ಧೈರ್ಯಗೆಡದೆ 8 ವರ್ಷದ ಸುಮಿತ್ ತನ್ನ 8 ತಿಂಗಳ ಸಹೋದರನನ್ನು ಎತ್ತಿಕೊಂಡು ಅಪಾಯಕಾರಿಯಾದ ಕೃಷ್ಣ ರೈಲ್ವೆ ಸೇತುವೆ ದಾಟಿ ರಾತ್ರಿ ವೇಳೆ ನಡೆದು ಬಂದು ಜನರಿಗೆ ಮಾಹಿತಿ ನೀಡಿರುತ್ತಾನೆ. ಈ ರೀತಿ ಧೈರ್ಯ ಸಾಹಸ ಪ್ರದರ್ಶಿಸುವುದರೊಂದಿಗೆ ತನ್ನ ಪ್ರಾಣದೊಂದಿಗೆ ತನ್ನ ತಮ್ಮನ ಪ್ರಾಣವನ್ನೂ ಉಳಿಸಿರುತ್ತಾನೆ. |
| 4 | ಕು॥ ಪೂರ್ಣಿಮಾ. ಎಡವೆ.<br>ತಂದೆ: ಆಶೋಕ ಎಡವೆ,<br>ಕರಡಿ ಕಾಲನಿ,<br>ನವಭಾಗ ಬಸ್ ಸ್ಟಾಂಡ್ ಹತ್ತಿರ,<br>ಬಿಜಾಪುರ.<br>12.05.1999 (15 ವರ್ಷ)<br>10ನೇ ತರಗತಿ | ದಿನಾಂಕ: 13.01.2014 ರಂದು ಬಾಗಲಕೋಟೆ ಜಿಲ್ಲೆಯ ತೊದಲಬಾಗಿ ಸಕ್ಕರೆ ಕಾರ್ಖಾನೆಗೆ ಭಾರಿ ಪ್ರಮಾಣದ ಕಬ್ಬು ಹೊತ್ತ ಟ್ರ್ಯಾಕ್ಟರ್ ಪಲ್ಟಿಯಾಗಿ 9 ಜನ ಸ್ಥಳದಲ್ಲೇ ಮರಣ ಹೊಂದಿರುತ್ತಾರೆ. ಟ್ರ್ಯಾಕ್ಟರ್‌ನಲ್ಲಿದ್ದ ಕಬ್ಬು ಮೇಲೆ ಬಿದ್ದು, ಒದ್ದಾಡುವ ಜನರನ್ನು ನೋಡಿ ಮತ್ತು ರಕ್ತ ಸುರಿಯುವುದನ್ನು ನೋಡಿ ತಡೆಯಲಾರದೆ ಧೈರ್ಯದಿಂದ ಸಿಕ್ಕ ಜನರನ್ನು ಪ್ರಾಣಾಪಾಯದಿಂದ ಪಾರುಮಾಡಿದ್ದಾಳೆ. ಅಪಘಾತಕ್ಕೀಡಾದ ಜನರನ್ನು ರಕ್ಷಿಸಲು ಸಂತೆಗೆ ಬಂದ ಜನರನ್ನು ಕೂಗಿ ಕರೆದು, ಕಬ್ಬಿನ ಹೊರೆಯನ್ನು ಎತ್ತಿ ಹೊರಗೆ ತೆಗೆದಿದ್ದಾರೆ. |
| 5 | ಮಾ॥ ಅನೂಪ್ ಕೆ.ಆರ್,<br>ತಂದೆ. ಕೆ.ಪಿ.ರೇಚಣ್ಣ,<br>ಬಸ್ತಿಪುರ ರಸ್ತೆ,<br>ಬಸವೇಶ್ವರನಗರ,<br>ಕೊಳ್ಳೇಗಾಲ ಟೌನ್,<br>ಚಾಮರಾಜನಗರ ಜಿಲ್ಲೆ. | ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕುಂತಿ ಬೆಟ್ಟದಲ್ಲಿ ಚಾಮರಾಜನಗರ ಜಿಲ್ಲಾ ಮಟ್ಟದ ಸಾಹಸ ಕ್ರೀಡಾ ಕಾರ್ಯಕ್ರಮದಲ್ಲಿ ಕುಂತಿ ಬೆಟ್ಟದ ವನಕೆ ಬೆಟ್ಟ ಹತ್ತಿ ಇಳಿಯುವ ಸಂದರ್ಭದಲ್ಲಿ ಇವರ ಸಹಪಾಠಿಯಾದ ಪ್ರಜ್ವಲ್ ಎಂಬಾತ ಬಂಡೆ ಹತ್ತುವಾಗ ಕಾಲು ಜಾರಿ ಬೀಳುವ ಸಂದರ್ಭದಲ್ಲಿ ಅನೂಪ್ ಕೆ.ಆರ್ ಮತ್ತು ಇವನ ಅಣ್ಣ ಸ್ವರೂಪ್ ಕೆ.ಆರ್ ಇವರುಗಳು ಕೈಯನ್ನು ನೀಡಿ ಹುಡುಗನನ್ನು ಪ್ರಾಣಾಪಾಯದಿಂದ ರಕ್ಷಿಸಿರುತ್ತಾರೆ. |

| | | |
|---|---|---|
| | 20.05.2003 (11 ವರ್ಷ)<br>6ನೇ ತರಗತಿ | |
| 6 | ಮಾ॥ ಸ್ವರೂಪ್ ಕೆ.ಆರ್,<br>ತಂದೆ. ಕೆ.ಪಿ.ರೇಚಣ್ಣ,<br>ಬಸ್ತಿಪುರ ರಸ್ತೆ,<br>ಬಸವೇಶ್ವರನಗರ,<br>ಕೊಳ್ಳೇಗಾಲ ಟೌನ್,<br>ಚಾಮರಾಜನಗರ ಜಿಲ್ಲೆ.<br>01.03.2001 (13 ವರ್ಷ)<br>9ನೇ ತರಗತಿ | ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕುಂತಿ ಬೆಟ್ಟದಲ್ಲಿ ಚಾಮರಾಜನಗರ ಜಿಲ್ಲಾ ಮಟ್ಟದ ಸಾಹಸ ಕ್ರೀಡಾ ಕಾರ್ಯಕ್ರಮದಲ್ಲಿ ಕುಂತಿ ಬೆಟ್ಟದ ವನಕೆ ಬೆಟ್ಟ ಹತ್ತಿ ಇಳಿಯುವ ಸಂದರ್ಭದಲ್ಲಿ ಇವರ ಸಹಪಾಠಿಯಾದ ಪ್ರಜ್ವಲ್ ಎಂಬಾತ ಬಂಡೆ ಹತ್ತುವಾಗ ಕಾಲು ಜಾರಿ ಬೀಳುವ ಸಂದರ್ಭದಲ್ಲಿ ಸ್ವರೂಪ್ ಕೆ.ಆರ್ ಮತ್ತು ಇವನ ತಮ್ಮ ಅನೂಪ್ ಕೆ.ಆರ್ ಇವರುಗಳು ಕೈಯನ್ನು ನೀಡಿ ಹುಡುಗನನ್ನು ಪ್ರಾಣಾಪಾಯದಿಂದ ರಕ್ಷಿಸಿರುತ್ತಾರೆ. |
| 7 | ಮಾ॥ ಬಿ.ಅಪ್ಪು<br>ತಂದೆ ಬಸವೇಗೌಡ,<br>ಕುಂದಕೆರೆ,<br>ಗುಂಡ್ಲುಪೇಟೆ ತಾಲ್ಲೂಕು,<br>ಚಾಮರಾಜನಗರ ಜಿಲ್ಲೆ<br>01.06.2001 (13 ವರ್ಷ)<br>6ನೇ ತರಗತಿ | ದಿನಾಂಕ:15.04.2014 ರಂದು ದೊರೆಸ್ವಾಮಿ ಮತ್ತು ಬೆಳ್ಳಯ್ಯ ಎಂಬುವವರ ಮೇಲೆ ಆಕಸ್ಮಿಕವಾಗಿ ಚಿರತೆಯು ಬಿದ್ದು ಕಚ್ಚಿ ಗಾಯ ಮಾಡಿರುತ್ತದೆ. ಈ ಸಂದರ್ಭದಲ್ಲಿ ಅಪ್ಪು ಕಲ್ಲು ಹೊಡೆದು ಚಿರತೆಯನ್ನು ಗಾಯಗೊಳಿಸಿ, ಓಡಿಸಿ ಧೈರ್ಯ ಸಾಹಸದಿಂದ ಇಬ್ಬರು ಬಾಲಕರನ್ನು ರಕ್ಷಿಸಿರುತ್ತಾನೆ. |
| 8 | ಕು॥ ಶಾಂತಿ ಕೆ.ಎಂ<br>ತಂದೆ. ಮುದ್ದ ಪಿ.ಸಿ,<br>ಕಿಬ್ಬೆಟ್ಟ ಗ್ರಾಮ,<br>ಸೋಮವಾರ ಪೇಟೆ,<br>ಕೊಡಗು ಜಿಲ್ಲೆ. | ದಿನಾಂಕ:01.12.2013ರಂದು ಮನೆಯ ಹತ್ತಿರವಿದ್ದ ಕೆರೆಯ ಕಟ್ಟೆಯ ಮೇಲೆ ಆಟವಾಡಿಕೊಂಡು ನಡೆದು ಹೋಗುತ್ತಿದ್ದ 3ನೇ ತರಗತಿಯಲ್ಲಿ ಓದುತ್ತಿದ್ದ ರೋಹಿತ್ ಎಂಬ ಬಾಲಕ ಆಕಸ್ಮಿಕವಾಗಿ ನೀರಿಗೆ ಬಿದ್ದು ಒದ್ದಾಡುತ್ತಿದ್ದ ಶಬ್ದ ಕೇಳಿ ಬಾಲಕನನ್ನು ರಕ್ಷಿಸಲು ಮುಂದಾದಳು. ಸಾಧ್ಯವಾಗದೇ ಇದ್ದಾಗ ಸಮೀಪದ ಬೇಲಿಯಲ್ಲಿದ್ದ ಉದ್ದದ ಬಡಿಗೆಯನ್ನು ಬಾಲಕನ ಕೈಗೆ ನೀಡಿ ಆತನನ್ನು ಕೆರೆಯ ದಡಕ್ಕೆ ತರುವಲ್ಲಿ ಯಶಸ್ವಿಯಾದಳು. ಆನಂತರ ಪ್ರಜ್ಞೆ ತಪ್ಪಿದ ಬಾಲಕನಿಗೆ ಆಕೆಯೇ ಪ್ರಥಮ ಚಿಕಿತ್ಸೆ ನೀಡಿ ಬಾಲಕನ ಹೊಟ್ಟೆಯಿಂದ ನೀರನ್ನು |

| | | |
|---|---|---|
| | 08.03.2001 (13 ವರ್ಷ)<br>8ನೇ ತರಗತಿ | ಹೊರತೆಗೆದು ಸಮಯ ಪ್ರಜ್ಞೆಯಿಂದ ಕೆರೆಗೆ ಬಿದ್ದ ರೋಹಿತ್‌ನನ್ನು ಕಾಪಾಡಿರುತ್ತಾಳೆ. |
| 9 | ಮಾ|| ಸಹನೇಶ್ ಆರ್,<br>ತಂದೆ: ರಾಜೇಶ್. ಎಂ,<br>ಶ್ರೀ ಮಹಂತೇಶ್ವರ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ<br>ಕುದೂರು, ಮಾಗಡಿ ತಾ||<br>ರಾಮನಗರ ಜಿಲ್ಲೆ.<br>19.08.2000 (14 ವರ್ಷ)<br>9ನೇ ತರಗತಿ | ದಿನಾಂಕ:05.06.2014 ರಂದು ಶ್ರೀ ಮಹಂತೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮಕ್ಕಳು ವಿಶ್ವ ಪರಿಸರ ದಿನಾಚರಣೆಯಲ್ಲಿ ಪಾಲ್ಗೊಂಡು ಸಂಜೆ ಶಾಲಾ ವಾಹನವನ್ನೇರಿ ಮನೆಗಳಿಗೆ ಹೊರಟಿರುತ್ತಾರೆ. 15 ರಿಂದ 20 ಮಕ್ಕಳನ್ನೊಳಗೊಂಡ ಶಾಲಾ ವಾಹನವು ಸೋಲೂರು ಹೋಬಳಿ ಕುಡ್ಲೂರು ಕ್ರಾಸ್ ಬಳಿ ಅಪಘಾತಕ್ಕೀಡಾಗಿರುತ್ತದೆ. ಆಗ ಬಸ್ಸಿನಲ್ಲಿದ್ದ 15 ರಿಂದ 16 ಮಕ್ಕಳನ್ನು ಬಸ್ಸಿನಿಂದ ಹೊರಗೆಳೆದು ಇವನು ರಕ್ಷಿಸಿರುತ್ತಾನೆ. |

## <u>ಮಕ್ಕಳ ಕಲ್ಯಾಣ ಪ್ರಶಸ್ತಿಗಳು</u>

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸೇವೆಯನ್ನು ಗುರುತಿಸಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಅದರಂತೆ 2014ನೇ ವರ್ಷದಲ್ಲಿ ಈ ಕೆಳಕಂಡ 2 ಸಂಸ್ಥೆಗಳು ಹಾಗೂ ಇಬ್ಬರು ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದ್ದು, ಇವರಿಗೆ ರಾಜ್ಯ ಪ್ರಶಸ್ತಿಯನ್ನು ದಿನಾಂಕ: 14.11.2014 ರಂದು ನಡೆಯುವ ಮಕ್ಕಳ ದಿನಾಚರಣೆಯ ಸಮಾರಂಭದಲ್ಲಿ ವಿತರಿಸಲಾಗುವುದು. ಸಂಘ-ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಯು ರೂ.1.00 ಲಕ್ಷ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ಮತ್ತು ವೈಯಕ್ತಿಕ ಪ್ರಶಸ್ತಿಯು ರೂ.25,000/- ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

| ಕ್ರ. ಸಂ | ವ್ಯಕ್ತಿಯ ಹೆಸರು ಮತ್ತು ವಿಳಾಸ | ಸಾಧನೆ |
|---|---|---|
| 1 | ಡಾ. ಡಿ. ವೀರೇಂದ್ರ ಹೆಗ್ಗಡೆಯವರು,<br>ಧರ್ಮಾಧಿಕಾರಿಗಳು,<br>ಶ್ರೀ ಕ್ಷೇತ್ರ ಧರ್ಮಸ್ಥಳ, | ಮಾನ್ಯರು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯಾಗಿ ಸುಮಾರು 40 ವರ್ಷಗಳಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. ಇವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು, ಪ್ರತಿ ವರ್ಷ ಸುಮಾರು 4ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಹಾಗೂ 4189 ಶಿಕ್ಷಕರಿಗೆ ಯೋಗ ತರಬೇತಿ ಮತ್ತು ನೈತಿಕ ಶಿಕ್ಷಣವನ್ನು ಈ |

| | | |
|---|---|---|
| | ಬೆಳ್ತಂಗಡಿ ತಾಲ್ಲೂಕು,<br>ದಕ್ಷಿಣ ಕನ್ನಡ–574216 | ಸಂಸ್ಥೆಗಳ ಮೂಲಕ ನೀಡುತ್ತಿದ್ದಾರೆ. ಹೈಸ್ಕೂಲ್ ವಿದ್ಯಾರ್ಥಿಗಳ ನೈತಿಕ ಶಿಕ್ಷಣಕ್ಕಾಗಿ ಸುಮಾರು 15,75,000 ಕನ್ನಡ ಪುಸ್ತಕಗಳನ್ನು ಪ್ರಕಟಿಸಿ ಹಂಚಲಾಗಿದೆ. ಆಯುಷ್ ಗ್ರಾಮ ಯೋಜನೆಯ ಮುಖಾಂತರ ಮಕ್ಕಳ ಆರೋಗ್ಯ, ಪೌಷ್ಠಿಕಾಂಶ, ಉಚಿತ ಆರೋಗ್ಯ ತಪಾಸಣೆ, ಉಚಿತ ಔಷಧಿ ವಿತರಿಸಿರುತ್ತಾರೆ. ಇವರು ಶಾಲಾಭಿವೃದ್ಧಿಗಾಗಿ ದಾನವನ್ನು ನೀಡಿರುತ್ತಾರೆ. ಸಾಂಪ್ರದಾಯಿಕ ಶಿಕ್ಷಣದೊಡನೆ ಆದರ್ಶ ಶಿಕ್ಷಣವನ್ನು ನೀಡುತ್ತಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಪದ್ಮಭೂಷಣ, ರಾಜರ್ಷಿ, ಧರ್ಮಭೂಷಣ, ಗೌರವ ಡಾಕ್ಟರೇಟ್, ಇಂದಿರಾಗಾಂಧಿ ಪ್ರಿಯದರ್ಶಿನಿ, ಡಿ. ದೇವರಾಜು ಅರಸು ಪ್ರಶಸ್ತಿ, ನಾಡೋಜ ಪ್ರಶಸ್ತಿ, ಗಿನ್ನಿಸ್ ಪುರಸ್ಕಾರ, ಜಿಂದಾಲ್ ರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕ ರತ್ನ ಮುಂತಾದ ಹಲವಾರು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಲಾಗಿದೆ. |
| 2 | ಶ್ರೀಮತಿ ಜಾಹೇದಾ ಖಾನ್,<br>ಗಂಜ ಕಾಲೋನಿ,<br>ನಂ.7–1101/21,<br>ಆದರ್ಶ ಶಾಲೆ ಎದುರು,<br>ಗುಲ್ಬರ್ಗಾ | ಇವರು ಅಲ್‌ಫರ್‍ಹಾ ಮಹಿಳಾ ಮಂಡಳದ ಮೂಲಕ ಬಾಲಕಾರ್ಮಿಕ ಮಕ್ಕಳ ವಸತಿ ಶಾಲೆಯನ್ನು ನಡೆಸುತ್ತಿದ್ದಾರೆ. ಇವರು ರಾಷ್ಟ್ರೀಯ ಸಾಕ್ಷರತಾ ಯೋಜನೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವುದರಿಂದ ಜಿಲ್ಲಾ ಆಡಳಿತ ಇವರನ್ನು ಸನ್ಮಾನಿಸಿರುತ್ತದೆ. |

| ಕ್ರ. ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಸಾಧನೆ |
|---|---|---|
| 1 | ಅಖಿಲ ಕರ್ನಾಟಕ ಮಕ್ಕಳ ಕೂಟ (ರಿ),<br>ಕೋಟೆ, ಚಾಮರಾಜಪೇಟೆ,<br>ಬೆಂಗಳೂರು–560018 | ಸಂಸ್ಥೆಯು ರಾಜ್ಯದಲ್ಲಿ ಸ್ಥಾಪಿತವಾದ ಮೊಟ್ಟ ಮೊದಲ ಮಕ್ಕಳ ಸಂಸ್ಥೆ. ಮಕ್ಕಳಿಗಾಗಿ ಪತ್ರಿಕೆ, ಪುಸ್ತಕ ಪ್ರಕಟಣೆ, ಹೊರಾಂಗಣ ಚಟುವಟಿಕೆಗಳ ಮೂಲಕ ಮಕ್ಕಳ ಮನೋವಿಕಾಸ ಮತ್ತು ಬೌದ್ಧಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಮಕ್ಕಳ ಶಾಲಾವಧಿಯ ನಂತರ ಕ್ರೀಡೆ, ಸಂಗೀತ, ನಾಟಕ ಮತ್ತು ಮನೋರಂಜನೆಗಾಗಿ ಹಲವಾರು ಚಟುವಟಿಕೆಗಳನ್ನು ಪ್ರತಿನಿತ್ಯವೂ ನಡೆಸುತ್ತಿದೆ. ಮಕ್ಕಳಿಗಾಗಿ 48 ಬೇಸಿಗೆ ಶಿಬಿರಗಳನ್ನು ಹಾಗೂ 29 ರಾಜ್ಯ ಮಟ್ಟದ ಮಕ್ಕಳ ಸಮ್ಮೇಳನಗಳನ್ನು ರಾಜ್ಯದ ವಿವಿದೆಡೆ ನಡೆಸಿರುತ್ತದೆ. ಮಕ್ಕಳ ಸಾಹಿತ್ಯಕ್ಕೆ ಕೊಡುಗೆಯಾಗಿ ಪ್ರತಿ ವರ್ಷ ಆರ್. |

| | | |
|---|---|---|
| | | ಕಲ್ಯಾಣಮ್ಮ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಮಕ್ಕಳಿಗಾಗಿ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿರುತ್ತದೆ. ದೂರದರ್ಶನ ಮತ್ತು ಆಕಾಶವಾಣಿ ಕೇಂದ್ರಗಳ ಮೂಲಕ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ. 2013ರಲ್ಲಿ ಸಂಸ್ಥೆಯು ತನ್ನ 75ನೇ ವರ್ಷದ ಅಮೃತ ಮಹೋತ್ಸವ ಸಮಾರಂಭವನ್ನು ಏರ್ಪಡಿಸಿದ್ದು ಸಾವಿರಾರು ಮಕ್ಕಳ ಪ್ರತಿಭೆಯನ್ನು ಹೊರತರುವಲ್ಲಿ ಯಶಸ್ವಿಯಾಗಿದೆ. |
| 2 | ಮಹೇಶ್ ಫೌಂಡೇಷನ್,<br>#792/1, ಸಿದ್ದೇಶ್ವರನಗರ,<br>ಕಣಬರ್ಗಿ,<br>ಬೆಳಗಾವಿ–590015 | ಸಂಸ್ಥೆಯು ಅನಾಥ ಮಕ್ಕಳ ಕುಟೀರವನ್ನು ನಡೆಸುತ್ತಿದೆ. ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡುತ್ತಿದೆ. ಹೆಚ್.ಐ.ವಿ ಸೋಂಕಿತರ ಸೇವೆ ಮಾಡುತ್ತಿದ್ದು ಕೊಳಚೆ ಪ್ರದೇಶಗಳ ಮಕ್ಕಳಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯ ನೀಡುತ್ತಿದೆ. ಎಚ್ಐವಿ ಸೋಂಕಿತ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿದೆ. ಸಾರ್ವಜನಿಕರಿಗೆ ಉಚಿತ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿರುತ್ತದೆ. ಸಂಸ್ಥೆಯು ಮಕ್ಕಳಿಗೆ ಸಂಗೀತ, ಚಿತ್ರಕಲೆ, ಕಂಪ್ಯೂಟರ್, ನೃತ್ಯ ಹಾಗೂ ಇನ್ನಿತರೆ ಚಟುವಟಿಕೆಗಳ ಬಗ್ಗೆ ತರಬೇತಿ ನೀಡುತ್ತಿದೆ. ಸಂಸ್ಥೆಯು ಮಕ್ಕಳಿಗೆ ಉಚಿತವಾಗಿ ಶಾಲಾಪುಸ್ತಕ, ಲೇಖನ ಸಾಮಗ್ರಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುತ್ತದೆ. |

## ಅಸಾಧಾರಣ ಪ್ರತಿಭಾ ಪುರಸ್ಕಾರ

ರಾಜ್ಯ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿರುವ ಈ ಕೆಳಕಾಣಿಸಿರುವ 13 ಮಕ್ಕಳನ್ನು ರಾಷ್ಟ್ರ ಪ್ರಶಸ್ತಿಗಾಗಿ ನಾಮ ನಿರ್ದೇಶನ ಮಾಡಿದ್ದು, ಅವರೆಲ್ಲರನ್ನು ರಾಜ್ಯ ಮಟ್ಟದಲ್ಲಿ ಆಚರಿಸಲಾಗುವ ಮಕ್ಕಳ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

| ಕ್ರ. ಸಂ | ಹೆಸರು ಮತ್ತು ವಿಳಾಸ | ಆಯ್ಕೆಯಾಗಿರುವ ಕ್ಷೇತ್ರ |
|---|---|---|
| 1 | ಕು|| ಅಪೇಕ್ಷಾ ಪೈ,<br>ತಂದೆ. ಶ್ರೀ ಬಿ ನಾಗೇಶ್ ಪೈ,<br>ಫ್ಲಾಟ್ ನಂ.ಎಫ್–7, ಸ್ಮರಣ್ ವೈಭವ ಅಪಾರ್ಟ್‌ಮೆಂಟ್ಸ್, 23ನೇ ಅಡ್ಡರಸ್ತೆ,<br>7ನೇ ಮುಖ್ಯರಸ್ತೆ, ವಿಜಯನಗರ, | ಕಲೆ |

| | | |
|---|---|---|
| | ಬೆಂಗಳೂರು – 560040 | |
| 2 | ಮಾ॥ ಹೆಚ್.ಬಿ.ಅನಿಲ್ ಕುಮಾರ್,<br>ತಂದೆ. ಬಾಬು,<br>ಹೆಗ್ಗಸನಹಳ್ಳಿ ಅಂಚೆ,<br>ರಾಯಚೂರು ತಾ॥ ಮತ್ತು ಜಿಲ್ಲೆ | ಕಲೆ |
| 3 | ಕು॥ ಆದಿತಿ ಚಿಂತಾಮಣಿ ಕಂಡೆಗಳ,<br>11ನೇ ಅಡ್ಡರಸ್ತೆ, ಎಮ್.ಜಿ.ರಸ್ತೆ,<br>ವಿದ್ಯಾಗಿರಿ,<br>ಬಾಗಲಕೋಟೆ | ಸಾಂಸ್ಕೃತಿಕ |
| 4 | ಮಾ॥ ಅನಿಲ್ ಕುಮಾರ್. ವಿ<br>ತಂದೆ. ವಿ.ವೆಂಕಟೇಶ್,<br>#35, 2ನೇ ಮುಖ್ಯರಸ್ತೆ,<br>3ನೇ ಅಡ್ಡ ರಸ್ತೆ,<br>ಪಟ್ಟಾಲಮ್ಮ ದೇವಸ್ಥಾನದ ಹಿಂಭಾಗ,<br>ಬನಶಂಕರಿ 5ನೇ ಹಂತ, ಉತ್ತರ ಹಳ್ಳಿ,<br>ಬೆಂಗಳೂರು – 560061 | ಸಾಂಸ್ಕೃತಿಕ |
| 5 | ಕು॥ ಅಕ್ಷತಾ ಶೆಟ್ಟಿ. ಬಿ<br>ತಂದೆ. ಪದ್ಮನಾಭ ಶೆಟ್ಟಿ. ಬಿ<br>ಶ್ರೀ ದುರ್ಗ ನಿಲಯ,<br>ಬಾಲವನ ರಸ್ತೆ, ಪರ್ಲಡ್ಕ, ಪುತ್ತೂರು<br>ದಕ್ಷಿಣ ಕನ್ನಡ | ಸಾಂಸ್ಕೃತಿಕ |
| 6 | ಕು॥ ವರುಧಿನಿ ಸದಾನಂದ ಪಟಕಿ, | ಶಿಕ್ಷಣ |

| | | |
|---|---|---|
| | ತಂದೆ. ಸದಾನಂದ ಪಟಕಿ,<br>“ಗಣಪತಿ”,<br>2ನೇ ಅಡ್ಡ ರಸ್ತೆ,<br>ಅಂಡಾಲ್ ದೇವಸ್ಥಾನದ ರಸ್ತೆ,<br>ಅಶ್ವತ್ ನಗರ, ಸವಲಂಗ ರಸ್ತೆ,<br>ಶಿವಮೊಗ್ಗ – 577204 | |
| 7 | ಮಾ॥ ಪ್ರದೀಪ್ ಎ.ಆರ್.ಎಸ್,<br>ತಂದೆ. ಎ.ಆರ್.ಶಿವಕುಮಾರ ಸ್ವಾಮಿ,<br>6ನೇ ಅಡ್ಡರಸ್ತೆ, ಎಸ್.ಐ.ಟಿ. ಬಡಾವಣೆ, ತುಮಕೂರು | ಶಿಕ್ಷಣ |
| 8 | ಕು॥ ಅನನ್ಯ ಜಿ.ಎಮ್,<br>ತಂದೆ. ಡಾ॥ ಮೋಹನ್ ಬಾಬು ಜಿ.ಎನ್,<br>#202, ಫ್ಲಾಟ್ ನಂ.19, ಸೋನಾ ಮೇರಿ ಅಪಾರ್ಟ್‌ಮೆಂಟ್ಸ್,<br>ರಂಗನಾಥಪುರ ಮುಖ್ಯ ರಸ್ತೆ,<br>18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,<br>ಬೆಂಗಳೂರು – 560003 | ಶಿಕ್ಷಣ |
| 9 | ಕು॥ ನಾಗಶ್ರೀ ಎಮ್.ಜೆ<br>ತಂದೆ. ಜಯದೇವ ಎಮ್.ಹೆಚ್,<br>ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಸಿಯಲ್ ಶಾಲೆ, ಸಿದ್ದಾಪುರ,<br>ಉತ್ತರ ಕನ್ನಡ ಜಿಲ್ಲೆ. | ಶಿಕ್ಷಣ |
| 10 | ಕು॥ ಸೈಯದ ಸುಮಯ್ಯ, | ಕ್ರೀಡೆ |

| | | |
|---|---|---|
| | ತಂದೆ. ಎಸ್.ಎಮ್.ಇಸ್ಮಾಯಿಲ್,<br>ಪೊಲೀಸ್ ಮುಖ್ಯ ಪೇದೆ,<br>ಮನೆ ನಂ.222-ಎ, ಖಾಜಿ ಮೊಹಲ್ಲಾ,<br>ಚಿತ್ರದುರ್ಗ | |
| 11 | ಮಾ॥ ಅಭಿಷೇಕ್ ಎಸ್. ನವಲೆ,<br>#56, ಸೆಕ್ಟರ್ ನಂ.5,<br>ಶ್ರೀನಗರ,<br>ಬೆಳಗಾವಿ - 590016 | ಕ್ರೀಡೆ |
| 12 | ಮಾ॥ ಶಮಂತ್ ರಾವ್ ಕಿದಿಯೂರು,<br>ತಂದೆ. ಶಶಿಧರ್ ರಾವ್ ಕಿದಿಯೂರು,<br>ಆಶ್ರಯ,<br>#4-143ಡಿ,<br>ಅಂಬಾ ರಸ್ತೆ, ಅಂಬಲಪಡಿ,<br>ಉಡುಪಿ - 576103 | ಕ್ರೀಡೆ |
| 13 | ಕು॥ ಕೆ.ವರ್ಷ<br>ತಂದೆ. ಚಂದ್ರಕಾಂತ್ ಕೋಲಾರ,<br>ಧೂಮನಸೂರ್,<br>ಹುಮಾನಬಾದ್ ತಾ॥,<br>ಬೀದರ್ ಜಿಲ್ಲೆ | ಕ್ರೀಡೆ |

## ಉತ್ತಮ ಸಮಾಜ ಸೇವಾ ಕಾರ್ಯಕರ್ತರಿಗೆ ಪ್ರಶಸ್ತಿ

ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆಯ ವತಿಯಿಂದ ಉತ್ತಮ ಸಮಾಜ ಸೇವಾ ಕಾರ್ಯಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. 2014ನೇ ಸಾಲಿನಲ್ಲಿ ಈ ಕೆಳಕಂಡವರಿಗೆ ಪ್ರಶಸ್ತಿಯನ್ನು ನೀಡಲು ಆಯ್ಕೆ ಮಾಡಲಾಗಿದೆ.

| ಕ್ರ. ಸಂ | ಹೆಸರು ಮತ್ತು ವಿಳಾಸ | ಸಾಧನೆಯ ವಿವರ |
|---|---|---|
| 1 | ಶ್ರೀಮತಿ ವಿಶಾಲಾಕ್ಷಿ,<br>ನಂ. 23, 3ನೇ ಅಡ್ಡರಸ್ತೆ,<br>4ನೇ ಮುಖ್ಯರಸ್ತೆ,<br>ಮಾರುತಿ ಬಡಾವಣೆ,<br>ಬೆಂಗಳೂರು – 560021 | ಇವರು ಅಪ್ಸಾ ಸಂಸ್ಥೆಯಲ್ಲಿ 1993 ರಿಂದ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿದ್ದು, ಅದರಲ್ಲೂ ಮಕ್ಕಳ ಹಕ್ಕುಗಳ ರಕ್ಷಣೆ, ಬೀದಿ ಮಕ್ಕಳು, ಬಾಲಕಾರ್ಮಿಕರು, ತಿರಸ್ಕರಿಸಲ್ಪಟ್ಟ ಮಕ್ಕಳು, ಮಾದಕ ಚಟುವಟಿಕೆಗೆ ಒಳಪಟ್ಟ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಹದಿಹರೆಯದ ಹುಡುಗಿಯರಿಗೆ ಜೀವನ ಕೌಶಲ್ಯ ಹಾಗೂ ವೃತ್ತಿಪರ ತರಬೇತಿ ನೀಡುತ್ತಿದ್ದಾರೆ. ಇವರು ಯೂನಿಸೆಫ್‌ನ ಬಾಲಕಾರ್ಮಿಕ ನಿರ್ಮೂಲನಾ ಯೋಜನೆಗೆ ಗಣನೀಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. |

## Children's Day : Awards

**Bangalore, November 12 (Karnataka Information)**

Department of Women and Child Development is celebrating Children's day Programme on November 14th every year. The Children who have exhibited exceptional courage and presence of mind to save the life of others in dangerous circumstances, exceptional talented children in the field of Art, Cultural, Sports and Academic, Institution, Individuals and a Social Worker who have rendered commendable service in the field of child welfare will be honoured on Children's day.

2014-15 Children's day programme will be held on 14-11-2014 at Ravindra Kalakshethra, J.C. Road, Bengaluru. at 11.00a.m His Excellency the Governor of Karnataka will inaugurate the function.

The scheme of giving bravery awards to children (both boys and girls) in the age group of 6-15 years who have shown exemplary courage in saving the life of others was accorded sanction during 2006-07. Two boys from each district are identified under Hoysala Award and two girls are identified under Keladi Chennamma Award. These children will be honoured with a memento and citation at the state level. Karnataka State Council for Child Welfare will give a cash prize of Rs.1,000\- and Rs.2,500/- cash prize from Teachers benefit fund to these children. These

children will be honoured by the department at the district level with the cash prize of Rs.10,000/- .

Exceptionally talented children in the field of Art, Cultural, Academic and Sports will be honoured with a memento and citation at the state level. These children will be honoured by the department at the district level with the cash prize of Rs.10,000/- .

The individuals who have rendered best services in the field of child welfare will be honoured with a cash prize of Rs.25,000/- and a citation. The Institutions who have rendered best services in the field of child welfare will be honoured with a cash prize of Rs.1,00,000/- and a citation. The best Social Worker who have rendered best services in the field of child welfare will be honoured Rs,.5,000/- cash prize and a citation by Karnataka State Council for Child Welfare

## HOYSALA & KELADI CHENNAMMA BRAVERY AWARDS FOR CHILDREN

On the occasion of the Children's Day, the Department of Women and Child Development confers Bravery Award every year for the Children who have exhibited exceptional courage and presence of mind to save the life of others in dangerous circumstances. The following children have been selected for the Hoysala and Keladi Chennamma Bravery Award for the year 2014-15.

| Sl. No | Name and Address | Details of the Incident |
|---|---|---|
| 1 | Master. Deekshith G.P<br>S/o Parameshwarachar,<br>Gavaturu, Rippan Pete Post, Hosanagara,<br>Shimoga Dist<br>04.05.2005 (9 Yrs)<br>4th Std | On.29.05.2014 Deekshith and his uncle's 5years old son Shrijan were playing. A dog attacked Shrijan. He was afraid and started running. He fell into a 25 feet pit in front of his house which was dug for drinking water. Deekshith with his presence of mind saved Shrijan from drowning. |
| 2 | Master. Kishan G.K,<br>S/o Kantharaju G.C | On.10.10.2013 during the Dasara Vacation 15 school children went for a picnic. During noon they were playing in the pond. Suddenly Tharun and Yashas were drowning and they shouted |

| | | |
|---|---|---|
| | Raghavendra Layout,<br>Madhugiri,<br>Tumkur Dist<br>20.04.1999 (15 Yrs)<br>10th Std | loudly. Seeing them crying for help Kishen without caring for his life jumped into the pond and saved his friends. |
| 3. | Master. Sumithkumar Sindagi,<br>S/o Sri Manjunatha Bheemappa Sindagi,<br>Sainagar, Mudhol,<br>Bagalkot<br>18.07.2005 (9 Yrs)<br>3rd Std | As her husband had committed suicide, She along with her two children wanted to commit suicide. On 26.03.2014 evening she went to Alamatti Dam. As water was not visible she put both her children on the railway track. Her saree got entangled to the wheel of the train and she died on the spot. As both the children were laid parallel to the track they escaped unhurt. Though his mother had died, Master Sumith courageously carried his 8 month old brother, crossed the dam and informed the people about the incident. With great courage he saved not only his life but also his brother's life. |
| 4 | Kum. Poornima Edave,<br>D/o Ashok Edave,<br>Karadi Colony, Near Navabhag Bus Stand, Bijapur<br>12.05.1999 (15 Yrs)<br>10th Std | On 13.01.2014 a tractor filled with heavy load of sugarcane toppled in Thodalabagi and 9 people died on the spot. The sugarcane fell on the people and they were bleeding and shouting for help. Kum. Poornima seeing them cry for help pulled out the sugar cane piled upon them. She also called nearby people and with their help saved the injured people. |
| 5 | Master. Anoop K.R,<br>S/o K.P.Rechanna,<br>Bastipura Road, Basaveshwaranagar, Kollegala Town, Chamarajanagar Dist | District level adventure sports meet for children was organized on 21.02.2014 to 23.02.2014 at Kunthi Hill, Pandavapura Taluq, Mandya Distirct. While getting down from the hill, Prajwal slipped and was about to fall from the hill. Anoop and his brother Swaroop extended their hand and pulled him up and saved Prajwal's life. |

| | | |
|---|---|---|
| | 20.05.2003 (11 Yrs)<br><br>6th Std | |
| 6 | Master. Swaroop K.R,<br><br>S/o K.P.Rechanna,<br><br>Bastipura Road, Basaveshwaranagar, Kollegala Town, Chamarajanagar Dist 01.03.2001 (13 Yrs)<br><br>9th Std | District level adventure sports meet for children was organized on 21.02.2014 to 23.02.2014 at Kunthi Hill, Pandavapura Taluq, Mandya Distirct. While getting down from the hill Prajwal slipped and was about to fall from the hill. Swaroop and his brother Anoop extended their hand and pulled him up and saved Prajwal's life. |
| 7 | Master. B.Appu,<br><br>S/o Basavegowda,<br><br>Kundakere,<br><br>Gundlupete Taluk,<br><br>Chamarajanagar Dist.<br><br>01.06.2001 (13 Yrs)<br><br>6th Std | On 15.10.2014 suddenly a cheetah attacked two boys Doreswamy and Bellayya and injured them. Seeing this Appu threw stone at the cheetah, injured it and chased it away and saved the life of these two boys. |
| 8 | Kum. Shanthi K.M<br><br>D/o Mudda P.C,<br><br>Kibbetta Village,<br><br>Somwarpet,<br><br>Kodagu Dist.<br><br>08.03.2001 (13 Yrs)<br><br>8th Std | On 01.12.2013 Kum Shanthi was studying in the verandah of her house. Rohith studying in 3rd Standard accidentally fell into the pond near her house and started shouting for help. Hearing him shouting for help Shanthi took out a big stick from the fence of the pond and pointed it towards Rohith. Rohith held onto the stick and was pulled out. Shanthi gave him first aid and with her presence of mind saved Rohith. |

| | | |
|---|---|---|
| 9 | Master. Sahanesh. R<br>S/o Rajesh .M,<br>Sri Mahanteshwara English Higher Primary School, Kuduru,<br>Magadi Taluk,<br>Ramanagar Dist.<br>19.08.2000 (14 Yrs)<br>9th Std | On 05.06.2014 the students of Shree Mahanteshwara Eglish High School participated in world Environment Day and were returning home in the school bus. The bus carrying 15 to 20 students met with an accident at Kudur cross, Solur Hobli. Master Sahanesh pulled out 15 to 16 children from the bus and saved them. |

## Child Welfare Awards

Government of Karnataka confers Awards every year for Institution and Individuals who have rendered commendable service in the field of child welfare. The following two Institution and two Individuals are selected for the said Award for the Year 2014. The Institution Award carries a cash prize of Rs.1.00 lakh and a citation and the Individual Award carries a cash prize of Rs.25,000/- and citation.

| **Sl. No** | **Name of the Individual and Address** | **Achievement** |
|---|---|---|
| **1** | Dr. D.Veeredra Heggade,<br>Dharmadhikari,<br>Sri Kshetra Dharmastala,<br>Belthangadi Tq,<br>Dakshina Kannada- | Dr.D.Veerendra Heggade is the Dharmadhikari of Shree Kshetra Dharmastala and has been in social service for the past 40 years. Many educational institutions are run by him. Every year more than 4 lakh children and 4189 teachers have been given yoga training and moral education. 15,75,000 Kannada books regarding moral science has been distributed to children. Under Aayush grama project children are given Nutrition, free health checkup, medicines etc. He has donated for the welfare of the schools. Traditional Education along with Ideal |

| | | |
|---|---|---|
| | 574216 | Education is given to children. Recognizing his service he has been honoured with Padmabhooshan, Rajarshi, Dharma Bhooshan, Honorary Doctorate, Indira Gandhi Priyadarshini, Dr. Devaraj Urs Award, Karnataka Rajyotsava Award and Karnataka Ratna and many more National and International Awards. |
| **2** | Smt. Jaheda Khan,<br>Ganja Colony,<br>No.7-1101/21,<br>Near Adharsh School,<br>Gulbarga | She started Child Labour Residential School for Children. She has sendered exceptional service in National Literary Project and has been awarded by district Administration. |

| **Sl. No** | **Name of the Institution and Address** | **Achievement** |
|---|---|---|
| **1** | Akhila Karnataka Makkala Koota (R),<br>Kote, Chamarajapete,<br>Bangalore - 560018 | This is the first organization started for childern. The organization has been working towards mental growth of the children by printing news paper, releasing books and conducting outdoor activities for chidern. The organization has been conducting activities in the field of sports, music, drama and entertainment after school hours. The organization has conducted 48 summer camps and 29 state level children's conference in various places of the state. It has been conferring R.Kalyanamma Award to encourge children's literature. Educational tours are conducted for childern. Programmes are conducted to bring out the talents of children through Akashwani & Doordarshan. During the year 2013 the institution celebrated its 75th year Platinum Jubilee and thousands of children were able to show their talent. |
| **2** | Mahesh Foundation,<br># 792/1, | The institution is running orphanage home for children. Nutrition food is given to HIV/AIDS infected children. |

| | | |
|---|---|---|
| | Siddeshwaranagar,<br>Kanabargi,<br>Belgaum. | It has been serving HIV infected people in slum areas by giving medical and educational services. It has been trying to bring HIV infected children to mainstream of the Society. General Public are provided free hospital facilities. The institution is conducting music, art, computer, dance and other trainings to children. The institution has distributed free school books, Stationeries and drinking water to children. |

## Exceptional Achievement Award for Children

The State Government has nominated the following 13 children for the National Award who have exhibited exceptional talent in the field of Academics, Art, Sports and Culture for the year 2014-15. The same children will be honoured on the occasion of Children's Day celebrations to be held on 14-11-2014.

| Sl. No | Name and Address | Field of Achievement |
|---|---|---|
| 1 | Kum. Apeksha Pai,<br>D/o Sri. B.Nagesh Pai,<br>Flat No. F-7, Smaran Vaibhav Apartments,<br>23rd cross, 7th Main, Vijayanagar,<br>Bangalore – 560040. | Art |
| 2 | Master. H.B.Anil Kumar<br>S/o Babu,<br>Heggasanahalli post,<br>Raichur Tq & Dist | Art |
| 3 | Kumari. Aditi Chintamani Khandegal<br>11th Cross, M.G.Road, Vidyagiri,<br>Bagalkote | Cultural |

| | | |
|---|---|---|
| 4 | Master. Anil Kumar. V<br>S/o V.Venkatesh,<br>#35, 2nd Main, 3rd Cross,<br>Behind Patalamma Temple,<br>Banashankari 5th Phase,<br>Uttarahalli,<br>Bangalore – 560061 | Cultural |
| 5 | Kum. Akshatha Shetty. B<br>D/o Padmanabha Shetty. B<br>Shri Durga Nilaya,<br>Balavana Road,<br>Parladka, Puttur,<br>Dakshina Kannada | Cultural |
| 6 | Kum. Varudhini Sadananda Patki,<br>D/o Sadananda Patki,<br>"Ganapathi"<br>2nd Cross, Andal Temple Road,<br>Ashwath Nagar,<br>Savalanga Road,<br>Shimoga – 577204 | Academic |
| 7 | Master. Pradeep A.R.S<br>S/o A.R.Shiva Kumara Swamy,<br>6th cross, SIT Extn,<br>Tumkur | Academic |

| | | |
|---|---|---|
| 8 | Kum. Ananya G.M<br><br>D/o Dr. Mohan Babu G.N<br><br>#202, Plot 19, Sona Mary Apartments,<br><br>Ranganatha pura main road,<br><br>18th Cross, Malleswaram,<br><br>Bangalore – 560003 | Academic |
| 9 | Kum. Nagashree M.J<br><br>D/o Jayadeva.M.H<br><br>Kitturu Rani Chennamma Residential School,Siddapur,<br><br>Uttar Kannada Dist | Academic |
| 10 | Kum. Syeda Sumaiya<br><br>D/o S.M.Ismail,<br><br>Police Head Constable,<br><br>Door No. 222-A, Khazi Mohalla,<br><br>Chitradurga | Sports |
| 11 | Master. Abhishek.S Navale<br><br>#56, Sector No.5<br><br>Shreenagar,<br><br>Belgaum-590016 | Sports |
| 12 | Master Shamanth Rao Kidiyoor,<br><br>S/o Shashidhar Rao Kidiyoor,<br><br>Ashraya,<br><br>#4-143D, | Sports |

| | | |
|---|---|---|
| | Amba Road, Ambalpady,<br><br>Udupi – 576103 | |
| 13 | Kum. K.Varsha<br><br>D/o Chandrakanth Kolar<br><br>Dhumansur<br><br>Humanabad Taluq,<br><br>Bidar District | Sports |

## Distinguished Social Worker Award 2014

Karnataka State Council for Child Welfare Confers award to distinguished Social Worker. During the year 2014 below Individual is selected for the said award.

| Sl. No | Name and Address | Details of the Incident |
|---|---|---|
| 1. | Smt. Vishalakshi T S<br><br>No. 23, 3rd cross, 4th main , Maruthi Extension<br><br>Bengaluru-21 | She has been working with APSA since 1993 in various capacities. She has worked for rehabilitating street children, child labourers and drug abused children. She has given job oriented training to adolescent girls. She has conducted many programmes under child labour eradication project sponsored by UNICEF. |